ನಾಗವೇಣಿ ಸೋಮಶೇಖರ್, ಮೈಸೂರು

*ಟಿವಿಗಳಲ್ಲಿ ಮಧ್ಯಾಹ್ನ ಊಟ ಮಾಡುವ ಸಮಯದಲ್ಲಿ ಬರೀ ಟಾಯ್ಲೆಟ್ ಆ್ಯಡ್‌ಗಳನ್ನೇ ತೋರಿಸುತ್ತಾರೆ. ಏಕೆ?*



'ಥೂ... ಅಸಹ್ಯ' ಎಂದು ಅವರಿವರಲ್ಲಿ ಹಂಚಿಕೊಳ್ಳುವುದರ ಮೂಲಕ ಆ್ಯಡ್‌ಗೆ ಪ್ರಚಾರ ದೊರೆಯುತ್ತಲ್ಲ!

ವೈ.ಜಿ. ನರಸಿಂಹನ್, ಶಿವಮೊಗ್ಗ

*ಮಂಕ, ಮಡೆಯ, ಮುಟ್ಠಾಳ; ಇವರಲ್ಲಿ ಯಾರು ಹೆಚ್ಚು ಬುದ್ಧಿವಂತರು?*

ಅವನ ಹೆಸರು ಹೇಳಲು, ಬರೆಯಲು ಒತ್ತಕ್ಷರ, ಮಹಾಪ್ರಾಣ ಎರಡರ ಅರಿವೂ ಇರಬೇಕಾದ್ದರಿಂದ – ಮುಟ್ಠಾಳನೇ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಭಗವಾನ್ ಎಂದು ಹೆಸರಿಟ್ಟುಕೊಂಡವರು ಭಗವಂತನನ್ನು ಬಾಯಿಗೆ ಬಂದಂತೆ ಬೈಯುತ್ತಾರಲ್ಲಾ...?*

ಅದೇ ವಿಪರ್ಯಾಸ! ಜನರು ರಾಮ ಎಂದರೆ ಭಗವಾನ್ ಎನ್ನುತ್ತಾರೆ; ಭಗವಾನ್ ಎಂದರೆ ರಾಮರಾಮಾ ಎನ್ನುತ್ತಾರೆ!

ಜೆ.ಸಿ. ರವಿಕುಮಾರ್, ಜಯಸುವರ್ಣಪುರ

*ವಾಮಾಚಾರ ಪ್ರಯೋಗದಿಂದ ಉಗ್ರರ ವಿಧ್ವಂಸಕ ಕೃತ್ಯಗಳನ್ನು ಹತ್ತಿಕ್ಕಲು ಸಾಧ್ಯವಿಲ್ಲವೆ?*




ಆಗಬಹುದೇನೋ... ಆದರೆ ವಾಮಾಚಾರಿಗೆ ಬೇಕಾದ ಉಗ್ರರ ಉಗುರು, ತುಳಿದಾಡಿದ ಮಣ್ಣು, ಕೂದಲು ಸಂಪಾದಿಸುವುದೇ ಕಷ್ಟ!

ಕುಮಾರ ಚಲವಾದಿ, ಹೊಳೆನರಸಿಪುರ

*ನಿಮಗೆ ಇಷ್ಟೊಂದು ಬುದ್ಧಿ ಇರುವಾಗ ನೀವೇ ಮುಖ್ಯಮಂತ್ರಿಯಾಗಬೇಕೆಂದು ಒತ್ತಾಯಿಸುತ್ತೇವೆ. ಅಂದಹಾಗೇ... ನಿಮ್ಮ ಜಾತಿ ಯಾವುದು?*

ಮಾನವಜಾತಿ. ನಿಮ್ಮದು?

ಮಲ್ಲಿಕಾರ್ಜುನ. ಹ. ಬಗಲಿ, ಜತ್ತ

*ಹುಡುಗಿಯರು ಕರೆಂಟ್ ಇದ್ದ ಹಾಗೆ ಎಂದೇಕೆ ಹೇಳುವರು?*

ಅವರು ಹರಿದಾಡಿದಾಗ ಗಂಡಿನ ಮುಖ ಟ್ಯೂಬ್‌ಲೈಟ್‌ನಂತೆ ಬೆಳಗುವುದರಿಂದ!

ವಿ.ಎಸ್. ಹಿಂದೂಪುರ, ಬಳ್ಳಾರಿ

*ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ಕಷ್ಟ. ಸಾಗರದಷ್ಟು ಸುಖಕ್ಕೆ?*

ಆಗಸದಷ್ಟು ಭ್ರಷ್ಟ!

ಎಸ್.ಸಿ. ರಮೇಶ್, ಶಿವಮೊಗ್ಗ

*ಜಗತ್ತು ಅರ್ಥವಾಗಬೇಕಾದರೆ ಜೈಲಿಗೆ ಹೋಗಬೇಕಂತೆ?*

ಅಲ್ಲ; ಮೈಲಿಗೆ ಹೋಗಬೇಕು.

ಎಸ್. ಪ್ರಭಾ, ಬೆಂಗಳೂರು

*ದೇಹಕ್ಕೆ ಉಪ್ಪು, ಹುಳಿ, ಖಾರ ಎಷ್ಟು ಅವಶ್ಯಕ?*

ಪರರ ಉಪ್ಪಿಗೆ ದ್ರೋಹ, ಜೀವನಕ್ಕೆ ಹುಳಿ, ಮನಸ್ಸಿಗೆ ಖಾರ ಮಾಡದಷ್ಟು.

ವಿ. ಹಮೀದ್, ವಿಟ್ಲ

*ಹುಡುಗಿಯರು ನಿಮ್ಮನ್ನು ಸುತ್ತುವರಿದಾಗ ನೀವೇನು ಮಾಡುವಿರಿ?*

ಸೋಲೇ ಗೆಲುವಿನ ಮೆಟ್ಟಲಲ್ಲವೇ... ಬೇಷರತ್ ಶರಣಾಗತನಾಗಿಬಿಡುತ್ತೇನೆ.

ಮಹಾವೀರ ಕಾಸರ, ಶಿವಮೊಗ್ಗ

*ಸಚಿವರು ವಿದ್ಯುತ್ ಚಿತಾಗಾರವನ್ನು ಹೇಗೆ ಉದ್ಘಾಟಿಸಬಹುದು?*

ನಿಜ. ಈಜುಕೊಳದ ಉದ್ಘಾಟನೆ ಈಜುವುದರ ಮೂಲಕ ಮಾಡಿದ್ದರು. ಆದರೆ..... ವೃಥಾ ಆಸೆ ಇಟ್ಟುಕೊಳ್ಳಬೇಡಿ.

ಶ್ರೀನಾಥ್ ಕೊನೇಟಿ, ಬೆಂಗಳೂರು

*ಎಲ್ಲ ಬಿಟ್ಟು ಅಲ್ಲೇಕೆ ಹೋಗಿದ್ದಿರಿ ನೀವು?*

ಯಾರೋ ನಿಮ್ಮ ಮಾರ್ಗವನ್ನೇ ಅನುಸರಿಸಿದರೆ ಒಳ್ಳೆಯದಾಗತ್ತೆ ಅಂದಿದ್ದರು.....

ವಸುಂಧರ ವರದರಾಜ್, ಕೋಲಾರ

*'ಬೆಂಕಿ ಪಟ್ಣ' ಆಯ್ತು; 'ಸಿಗರೇಟ್' ಬರ್ತಾ ಇದೆ. ಮುಂದೇನು ರಾಮ್?*

ಚಿತ್ರಗಳ ಗುಣಮಟ್ಟಕ್ಕೆ ಬಿದ್ದಿರುವಂತಹದೇ – ಹೊಗೆ!

ಅಮರಯ್ಯಾ ಪತ್ರಿಮಠ, ಶೋರಾಪೂರ

*ಹೃದಯವಂತ ಹೇಗಿರುತ್ತಾನೆ?*

ಕಷ್ಟದಲ್ಲಿ! ಅವರಿವರಿಗೆ ಶೂರಿಟಿ ಹಾಕಿರುತ್ತಾನಲ್ಲ!

## ಬಹುಮಾನಿತ ಪ್ರಶ್ನೆ

ಎಚ್.ಆರ್. ದೇಸಾಯಿ, ರಾಯಚೂರು

*ಕವಿಗಳು ತಮ್ಮ ಕವಿತೆಗಳಲ್ಲಿ ಹೆಣ್ಣನ್ನು ವರ್ಣಿಸಿರುವಷ್ಟು ಗಂಡನ್ನು ಏಕೆ ವರ್ಣಿಸಿಲ್ಲ?*

ಕಾವ್ಯದ ಚಪಲ ಇಲ್ಲದಿದ್ದವರೂ ಹೆಣ್ಣಿನ ಚಪಲದಿಂದ ಕವನ ಓದಲೆಂಬ ಯೋಚನೆ!

ವಿ. ಹೇಮಂತಕುಮಾರ್, ಬೆಂಗಳೂರು

*ಎಷ್ಟೇ ನಿದ್ರೆ ಕೆಟ್ಟಿದ್ದರೂ ಹೆಣ್ಣಿನ ಜೊತೆ ಮಾತನಾಡುವಾಗ ನಿದ್ರೆ ಬರುವುದಿಲ್ಲವಲ್ಲ, ಏಕೆ?*

ಎಚ್ಚರತಪ್ಪಿ ಏನಾದರೂ ಮಾತಾಡಿಬಿಟ್ಟರೆ ದವಡೆ ಊದೀತೆಂಬ ಭಯ!

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಹೆಣ್ಣು ಸಿಂಗಾರ ಮಾಡಿಕೊಳ್ಳಲು ಬಹಳ ಹೊತ್ತು ತೆಗೆದುಕೊಳ್ಳುತ್ತಾಳೆ. ಗಂಡು?*

ಅವಳು ಸಿಂಗರಿಸಿಕೊಳ್ಳಲು ಆರಂಭಿಸಿದಾಗ ಒಮ್ಮೆ, ಮುಗಿಸಿದಾಗ ಒಮ್ಮೆ ಶೇವ್ ಮಾಡಿಕೊಳ್ಳುತ್ತಾನೆ.

ರವಿ. ಎಂ. ಪೈ, ಹೊನ್ನಾವರ

*ಹೆಸರು ಕರ್ನಾಟಕವಾದರೂ ಉಸಿರೇಕೆ ಕನ್ನಡವಾಗಲಿಲ್ಲ?*




ಪರಭಾಷಾ ಮಾಲಿನ್ಯದಿಂದ ಉಸಿರು ಸಿಕ್ಕಿಹಾಕಿಕೊಂಡಿದೆಯಲ್ಲ!

ಓಂ ಚನ್ನೇಶ್, ಭದ್ರಾವತಿ

*ನರ್ಸ್ ಬಳಿ ಪ್ರೇಮ ನಿವೇದನೆ ಮಾಡುವುದು ಹೇಗೆ?*

ರೋಗಿಯಂತೆ ನಿಲ್ಲಿ; ಅವಳೇ ನಿಮ್ಮ ನಾಡಿ ಮಿಡಿತ ತಿಳಿದುಬಿಡುತ್ತಾಳೆ.

ಆರ್. ಮಧುಸೂದನ್, ಹಾಸನ

ಪ್ರತಿಯೊಬ್ಬರೊಳಗೂ ಒಂದು "ಕಳ್ಳ ಮನಸ್ಸು" ಇರುತ್ತದೆ ಎಂಬ ಸತ್ಯವನ್ನು ನೀವು ಒಪ್ಪಿಕೊಳ್ಳುತ್ತೀರಾ?

ನೀವು ತಿಳಿದವರು, ಲೋಕ ಕಂಡವರು. ನನಗೆ ತಿಳಿದಿಲ್ಲದಿದ್ದರೂ, ನಿಮ್ಮ ಸ್ವಾನುಭವದ ಮಾತುಗಳನ್ನು ಸತ್ಯವೆಂದು ಸ್ವೀಕರಿಸುತ್ತೇನೆ.

■ ರಾಮ್